ಸಿ.ಸಿ. ನಂಬರಃ 91/2023

ಪಿ.ಡಬ್ಲ್ಯೂಃ 1

ದಿಃ 24-11-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ.ಎನ್.ಎನ್ ಇವರಿಂದಃ

ನೀವು ಯಾವ ವ್ಯವಹಾರ ಮಾಡುತ್ತೀರಿ ಎಂದರೆ ಸಾಕ್ಷಿಯು ಪಾತ್ರೆ ಅಂಗಡಿ ಇರುತ್ತದೆ ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಿಂದ ಪಾತ್ರೆ ಅಂಗಡಿ ನಡೆಸುತ್ತಿದ್ದೀರಿ ಎಂದರೆ ಸಾಕ್ಷಿಯು ಸುಮಾರು 20-25 ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದೇವೆ ಎಂದು ನುಡಿಯುತ್ತಾರೆ. ಪಾತ್ರೆ ಅಂಗಡಿಯ ಬಗ್ಗೆ ಏನಾದರೂ ನೊಂದಣಿ ಆಗಿದೆಯಾ ಎಂದರೆ ಸಾಕ್ಷಿಯು ಲೈಸೆನ್ಸ ಇರುತ್ತದೆ ಎಂದು ನುಡಿಯುತ್ತಾರೆ. ಪಾತ್ರೆ ಅಂಗಡಿಯು ನಿಮ್ಮ ಸ್ವಂತದ್ದಾ ಅಥವಾ ಬಾಡಿಗೆಯದ್ದಾ ಎಂದರೆ ಸಾಕ್ಷಿಯು ಸ್ವಂತದ್ದು ಎಂದು ನುಡಿಯುತ್ತಾರೆ. ಅದರ ನೊಂದಾಯಿತ ಸಂಖ್ಯೆ ಅಥವಾ ಅಂಗಡಿ ಸಂಖ್ಯೆ ಹೇಳಲು ಆಗುತ್ತಾ ಎಂದರೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಪಾತ್ರೆ ಅಂಗಡಿಯನ್ನು ಹೊರತುಪಡಿಸಿ ಮತ್ತೆ ಯಾವುದಾದರೂ ವ್ಯವಹಾರವನ್ನು ಮಾಡುತ್ತೀರಿ ಎಂದರೆ ಸಾಕ್ಷಿಯು ರೈತಾಬಿ ಮಾಡುತ್ತೇನೆ, ಆದರೆ ಬೇರೆ ಯಾವುದೇ ವ್ಯವಹಾರ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ಪಾತ್ರೆ ವ್ಯಾಪಾರದಿಂದ ನಿಮಗೆ ತಿಂಗಳ ಅಥವಾ ವಾರ್ಷಿಕ ಆದಾಯ ಎಷ್ಟು ಬರುತ್ತದೆ ಎಂದರೆ ಹೇಳಲು ಅಗುತ್ತಾ ಎಂದರೆ ಸಾಕ್ಷಿಯು ಲೆಕ್ಕ ಮಾಡಿರುವುದಿಲ್ಲ

ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಪಾತ್ರೆ ಅಂಗಡಿ ವ್ಯವಹಾರದಲ್ಲಿ ಖರೀದಿ ಮಾಡಿದ ಬಗ್ಗೆ ಹಾಗೂ ಖರೀದಿಗೆ ಕೊಟ್ಟ ಬಗ್ಗೆ ಸರಿಯಾಗಿ ಲೆಕ್ಕ ಇಡಬೇಕಾಗುತ್ತದೆ ಎಂದರೆ ಸರಿ. ಪಾತ್ರೆ ಅಂಗಡಿ ಮಾಲೀಕರಿಗೆ ದಿನಕ್ಕೆ ಎಷ್ಟು ವ್ಯವಹಾರ ಅ ಗಿರುತ್ತದೆ ಹಾಗೂ ಎಲ್ಲಿಂದ ಪಾತ್ರೆ ಖರೀದಿ ಮಾಡಿಕೊಂಡು ವ್ಯವಹಾರ ಮಾಡುತ್ತಾರೆ ಎಂದು ನಿರ್ದಿಷ್ಟವಾಗಿ ಗೊತ್ತಿರುತ್ತದೆ ಎಂದರೆ ಸಾಕ್ಷಿಯು ಅಂದಾಜು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪಾತ್ರೆ ಅಂಗಡಿಯ ವ್ಯವಹಾರದ ಬಗ್ಗೆ ಜಿ ಎಸ್ ಟಿ ಅಥವಾ ಆದಾಯ ತೆರಿಗೆ ಯನ್ನು ಕಟ್ಟುತ್ತಿದ್ದೀರಾ ಎಂದರೆ ಸಾಕ್ಷಿಯು ಜಿ ಎಸ್ ಟಿ ಕಟ್ಟುತ್ತೇವೆ ಎಂದು ನುಡಿಯುತ್ತಾರೆ. ನೀವು ವಾರ್ಷಿಕವಾಗಿ ಎಷ್ಟು ಮೊತ್ತಕ್ಕೆ ಜಿ ಎಸ್ ಟಿ ತುಂಬುತ್ತೀರಿ ಎಂದರೆ ಸಾಕ್ಷಿಯು ನಮ್ಮ ವಕೀಲರನ್ನು ಕೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಒಂದು ವೇಳೆ ಮಾನ್ಯ ನ್ಯಾಯಾಲಯವು ಜಿ ಎಸ್ ಟಿ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಲು ಅನುಮತಿ ಕೊಟ್ಟರೆ ಹಾಜರುಪಡಿಸಲು ತಯಾರು ಇರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ರೈತಾಬಿ ಮಾಡುತ್ತಿರುವ ಜಮೀನು ಸರ್ವೆ ನಂಬರು ಹಾಗೂ ಅದು ಎಲ್ಲಿ ಇರುತ್ತದೆ ಎಂದು ಹೇಳಲು ಬರುತ್ತಾ ಎಂದರೆ ಅದು ಪಿತ್ರಾರ್ಜಿತ ಆಸ್ತಿ ಹೆಬ್ಬುಳದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರು ಎಷ್ಟು ಎಂದರೆ ಸಾಕ್ಷಿಯು ಅಷ್ಟು ಲಕ್ಷ್ಯ ಇಲ್ಲ ಎಂದು ನುಡಿಯುತ್ತಾರೆ. ಎಷ್ಟು ಕ್ಷೇತ್ರ ಇರುತ್ತದೆ ಎಂದರೆ ಸಾಕ್ಷಿಯು 7 ಎಕರೆ ಇರುತ್ತದೆ ಎಂದು ನುಡಿಯುತ್ತಾರೆ. ಪಿತ್ರಾರ್ಜಿತ ಆಸ್ತಿಯಲ್ಲಿ ನೀವು ಎಷ್ಟು ಜನ ಸಾಮಾಯಿಕ ಹಕ್ಕುದಾರರು ಇರುತ್ತೀರಿ ಎಂದರೆ ಸಾಕ್ಷಿಯು 6 ಜನ ಇರುತ್ತೇವೆ ಎಂದು ಹೇಳಿದ್ದು, ನಂತರ ಮುಂದುವರೆದು 8 ಜನ ಇರುತ್ತೇವೆ ಎಂದು

ನುಡಿಯುತ್ತಾರೆ. ಪಿತ್ರಾರ್ಜಿತ ಆಸ್ತಿಯಲ್ಲಿ ಎಷ್ಟು ಬೆಳೆ ಹಾಗೂ ಯಾವ ಯಾವ ಬೆಳೆ ಬೆಳೆಯುತ್ತೀರಿ ಎಂದರೆ ಸಾಕ್ಷಿಯು ಭತ್ತ ಬೆಳೆಯುತ್ತೇವೆ ಎಂದು ನುಡಿಯುತ್ತಾರೆ. ಭತ್ತದ ಬೆಳೆಯಿಂದ ನಿಮಗೆ ವಾರ್ಷಿಕವಾಗಿ ಎಷ್ಟು ಆದಾಯ ಬರುತ್ತದೆ ಎಂದರೆ ಸಾಕ್ಷಿಯು 10-15 ಕಣಗ ಬರುತ್ತದೆ ಎಂದು ನುಡಿಯುತ್ತಾರೆ. 15 ಕಣಗಕ್ಕೆ ರೂಯಿಯಲ್ಲಿ ಬೆಲೆ ಹಾಕಿದರೆ ಎಷ್ಟು ಆಗಬಹುದು ಎಂದರೆ ನನಗೆ ಗೊತ್ತಿರುವುದಿಲ್ಲ. ಪಿತ್ರಾರ್ಜಿತ ಆಸ್ತಿಯಲ್ಲಿ 8 ಜನ ಸಾಮೂಹಿಕ ಹಕ್ಕುದಾರರು ಇರುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಲು ಮಾನ್ಯ ನ್ಯಾಯಾಲಯ ಅನುಮತಿ ಕೊಟ್ಟರೆ ಹಾಜರುಪಡಿಸುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ವ್ಯವಹಾರ ಹಾಗೂ ರೈತಾಬಿ ಕೆಲಸದಿಂದ ತಿಂಗಳಿಗೆ ಎಷ್ಟು ಆದಾಯ ಬರುತ್ತದೆ ಎಂದರೆ ಸಾಕ್ಷಿಯು 20-25 ಸಾವಿರ ಬರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಪಾತ್ರೆ ಅಂಗಡಿಯಲ್ಲಿ ಎಷ್ಟು ಜನ ಕೆಲಸಗಾರರು ಇದ್ದಾರೆ ಎಂದರೆ ಒಬ್ಬರು ಇದ್ದಾರೆ ಎಂದು ನುಡಿಯುತ್ತಾರೆ. ಆತನಿಗೆ ತಿಂಗಳಿಗೆ ಎಷ್ಟು ವೇತನವನ್ನು ಕೊಡುತ್ತೀರಿ ಎಂದರೆ ಸಾಕ್ಷಿಯು 6-7 ಸಾವಿರ ಕೊಡುತ್ತೇನೆ ಎಂದು ನುಡಿಯುತ್ತಾರೆ.

2. ಆರೋಪಿಯು ನಿಮಗೆ ಹೇಗೆ ಹಾಗೂ ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿಯು ಆರೋಪಿಯ ಕನ್ನಡಕ ಅಂಗಡಿ ಇದ್ದು, ಆಗಾಗ ನಾನು ಅವರ ಅಂಗಡಿಗೆ ಹೋಗುತ್ತಿರುತ್ತೇನೆ ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಿಂದ ಹೋಗುತ್ತಿದ್ದೀರಿ ಎಂದರೆ ಸಾಕ್ಷಿಯು 10-15 ವರ್ಷಗಳಿಂದ ಎಂದು ನುಡಿಯುತ್ತಾರೆ. ತಿಂಗಳಿಗೆ ಒಂದು

ಸಲ ಹೋಗುತ್ತಿದ್ದಿರೋ ಅಥವಾ ವರ್ಷಕ್ಕೆ ಹೋಗುತ್ತೀರೋ ಎಂದರೆ ಸಾಕ್ಷಿಯು ಲೆಕ್ಕ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಅದನ್ನು ಹೊರತುಪಡಿಸಿ ಆರೋಪಿಯಿಂದ ಮತ್ತೆ ಯಾವುದೇ ರೀತಿಯಿಂದ ವ್ಯವಹಾರವನ್ನು ಮಾಡಿರುವುದಿಲ್ಲವಾ ಎಂದರೆ ಸಾಕ್ಷಿಯು ಆರೋಪಿಯಿಂದ ಜಾಗವನ್ನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ವರ್ಷ ಹಾಗೂ ಎಲ್ಲಿ ಖರೀದಿ ಮಾಡಿರುತ್ತೀರಿ ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಎಷ್ಟು ವರ್ಷದ ಹಿಂದೆ ಖರೀದಿಮಾಡಿರುತ್ತೀರಿ ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ಅಂದಾಜು 10 ವರ್ಷಗಳ ಹಿಂದೆ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಜೆ ಎಂ ಎಫ್ ಸಿ, ಅಂಕೋಲಾ.